ಎರಡನೆಯದಾಗಿ, ಭೂಮಿ ಮಂಜೂರಾಗಿ ಹಕ್ಕುಪತ್ರಗಳನ್ನು ಕೊಟ್ಟು ೮-೧೦ ವರ್ಷ ಗಳಾಗಿದ್ದರೆ ಅಂತಹ ಆರ್ಡರ್‌ಗಳನ್ನು ವಜಾ ಮಾಡುವುದು ಕಷ್ಟ. ಕೆರೆ ಅಂಗಳದ ಭೂಮಿಯನ್ನು ಮಂಜೂರು ಮಾಡಿರತಕ್ಕ ನಿದರ್ಶನಗಳಿವೆ. ಸಮಸ್ಯೆಗಳೂ ಇವೆ. ದೊಡ್ಡ ದೊಡ್ಡ ಜಲಾಶಯ ಗಳಲ್ಲಿ ಆಫಾರೆಸ್ಟ್ ಎಂದು ಕ್ಯಾಂಚ್‌ಮೆಂಟ್ ಟ್ರೀಟ್‌ಮೆಂಟ್ ಮಾಡುವ ಬಗ್ಗೆ ಸರ್ಕಾರ ತೀವ್ರವಾಗಿ ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಯೋಚನೆ ಮಾಡುತ್ತಿದೆ.

ಕೃಷ್ಣ ನದಿಯಲ್ಲಿ ದೊರೆಯುವ ನೀರಿನ ಪ್ರಮಾಣ

೧೨೬ (೩೮೪) ಶ್ರೀ ಬಿ. ರಾಜಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಜಲಾ ನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೃಷ್ಣಾ ನದಿಯಲ್ಲಿ ನಮ್ಮ ಪಾಲಿಗೆ ದೊರೆಯಬಹುದಾದ ನೀರು ಎಷ್ಟು ಹಾಗೂ ಹಾಲಿ ಉಪಯೋಗಿಸುತ್ತಿರುವ ನೀರು ಎಷ್ಟು ?

ಆ) ಈಗ ಕಟ್ಟುತ್ತಿರುವ ಯೋಜನೆಗಳೆಲ್ಲವೂ ಪೂರ್ತಿಗೊಂಡಾಗ ನಾವು ಎಷ್ಟು ಪ್ರಮಾಣದ ನೀರನ್ನು ಬಳಸಿದಂತಾಗುತ್ತದೆ ?

ಇ) ಉಳಿದ ನೀರಿನ ಬಗ್ಗೆ ಏನು ಯೋಜನೆ ಕೈಗೊಳ್ಳಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣ ಜಲ ವಿವಾದ ನ್ಯಾಯಾಧಿಕರಣ ತೀರ್ಪಿನ ಪ್ರಕಾರ ಯೋಜನೆ 'ಎ' ಆಲ್ಲಿ ಕರ್ನಾಟಕ ರಾಜ್ಯವು ೭೫೫ ಟಿಎಂಸಿ ನೀರನ್ನು ಪ್ರತಿವರ್ಷ ಕೃಷ್ಣಾದಲ್ಲಿ ಉಪಯೋಗಿಸಲು ಅವಕಾಶವಿದೆ. ಆದರಲ್ಲಿ

೧) ಯೋಜನೆಗಳು ಮುಗಿದು ಆವುಗಳಿಂದ ಉಪಯೋಗಿಸುತ್ತಿರುವ ನೀರು ೩೯೮.೦ಳಿ ಟಿಎಂಸಿ
೨) ನಿರ್ಮಾಣ ಹಂತದಲ್ಲಿರುವ ಯೋಜನೆಗಳಿಂದ ಉಪಯೋಗಿಸುವ ನೀರು ೨೪೮.೫೪ ಟಿಎಂಸಿ
೩) ಮುಂದೆ ನಿರ್ಮಾಣ ಮಾಡುವ ಯೋಜನೆಗಳಿಂದ ಉಪಯೋಗಿಸಿಕೊಳ್ಳುವ ನೀರು. ೮೭.೪೨ ಟಿಎಂಸಿ

ಒಟ್ಟು ೭೫೫.೦೦ ಟಿಎಂಸಿ

ಇದಲ್ಲದೆ ಗೋದಾವರಿ ಕೊಳದಿಂದ ಕೃಷ್ಣ ಕೊಳಕ್ಕೆ ಬರುವ ೨೫ ಟಿಎಂಸಿ ನೀರನ್ನು ಈಗಲೇ ಉಪಯೋಗಿಸಲು ಯೋಜಿಸಲಾಗಿದೆ.

ಆ) ಈಗ ಕಟ್ಟುತ್ತಿರುವ ಯೋಜನೆಗಳು ಪೂರ್ತಿಗೊಂಡಾಗ ೬೪೬.೫೮ ಟಿಎಂಸಿ ನೀರನ್ನು ಬಳಸಿದಂತೆ ಆಗುತ್ತದೆ.

ಇ) ಉಳಿದ ನೀರನ್ನು ಕೆಳಕಂಡ ಯೋಜನೆಗಳಿಗಾಗಿ ಉಪಯೋಗಿಸಿಕೊಳ್ಳಲು ಯೋಜಿಸ ಲಾಗಿದೆ.

೧) ಕೃಷ್ಣ ಮೇಲ್ದಂಡೆ ಯೋಜನೆ ೨ನೇ ಹಂತ — ೫೪.೦೦ ಟಿಎಂಸಿ (ಯೋಜನೆಯ ವರದಿ ಕೇಂದ್ರಕ್ಕೆ ಕಳುಹಿಸಲಾಗಿದೆ. ಟೀಕೆಗಳಿಗೆ ಉತ್ತರಿಸಬೇಕಾಗಿದೆ)

೨) ಭೀಮಾ ಫ್ಲೋ — ೯.೦೦ ಟಿಎಂಸಿ (ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ)

೩) ಭೀಮಾ ಲಿಫ್ಟ್ — ೬.೦೦ ಟಿಎಂಸಿ (ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ)

೪)	ರಾಮಘಾಳ್ ಏತ	೪.೫೦ ಟಿಎಂಸಿ (ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ)
೫)	ಭದ್ರಾ ಮೇಲ್ದಂಡೆ	೮.೦೦ ಟಿಎಂಸಿ (ಅನ್ವೇಷಣಾ ಹಂತದಲ್ಲಿದೆ)
೬)	ಮದಗ ದಾಸೂರ್	೨.೭೧ ಟಿಎಂಸಿ (ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ)
೭)	ಗಂಡೋರಿ ನಾಲಾ	೨.೧೬ ಟಿಎಂಸಿ (ಕೇಂದ್ರ ಜಲ ಆಯೋಗದ ಸಮ್ಮತಿ ದೊರಕಿದೆ)
೮)	ಹೊಸದಾಗಿ ತೆಗೆದುಕೊಳ್ಳಬೇಕಾದ ಯೋಜನೆಗಳು	೧.೦೫ ಟಿಎಂಸಿ (ಅನ್ವೇಷಣಾ ಹಂತದಲ್ಲಿದೆ)

ಶ್ರೀ ಜಿ. ರಾಜಗೌಡ.—ಬಚಾವತ್ ಕಮಿಟಿಯು ತೀರ್ಪಾನದಂತೆ ೮೦೦ ಟಿಎಂಸಿ ನೀರನ್ನು ಆಂಧ್ರಪ್ರದೇಶ ಉಪಯೋಗಿಸಿಕೊಂಡಿದೆ. ಅದು ಅದ ಮೇಲೆ ತೆಲುಗುಗಂಗಾ ಯೋಜನೆಯನ್ನು ಕೈಗೆತ್ತಿಕೊಂಡು ೫.೭೫ ಲಕ್ಷ ಎಕರೆ ಭೂಮಿಗೆ ನೀರನ್ನು ಒದಗಿಸುವುದಕ್ಕೆ ಈಗಾಗಲೇ ೧೫೫ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿದೆ. ಈ ವರ್ಷ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಗುರಿಯನ್ನು ಇಟ್ಟುಕೊಂಡಿದೆ, ಈ ಬಗ್ಗೆ ನಮ್ಮ ಸರ್ಕಾರದ ಪ್ರತಿಕ್ರಿಯೆ ಏನು ?

ಶ್ರೀ ಹೆಚ್. ಡಿ. ದೇವೇಗೌಡ.—೭೦೦ ಟಿಎಂಸಿ ನೀರನ್ನು ೨೦೦೦ ಇಸವಿ ಮೇ ತಿಂಗಳಿನ ಒಳಗೆ ಉಪಯೋಗಿಸಿ ಕೊಳ್ಳಲಿಕ್ಕೆ ನಮ್ಮ ರಾಜ್ಯಕ್ಕೆ ಅಧಿಕಾರ ಕೊಟ್ಟಿದ್ದಾರೆ.

ಶ್ರೀ ಜಿ. ರಾಜಗೌಡ.—೨೦೦೦ ಇಸವಿಯ ತನಕ ತಮಗೆ ಅವಕಾಶವಿದೆ. ಆದರೆ ಆಂಧ್ರಪ್ರದೇಶದವರು ಹೆಚ್ಚುವರಿ ನೀರನ್ನು ಉಪಯೋಗಿಸಿಕೊಳ್ಳುತ್ತೇವೆಂದು ಪಾದ ಮಾಡುತ್ತಿದ್ದಾರೆ ಅದಕ್ಕೆ ತಾವೇನು ಹೇಳುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಅವರ ವಾದಕ್ಕೆ ಹುರುಳಿಲ್ಲ.

ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು

೧೨೭ (೨೪೩) ಶ್ರೀಮತಿ ಮುಖ್ತಾರುನ್ನೀಸ್ ಬೇಗಂ (ನರಸಿಂಹರಾಜ)...ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಅಲ್ಪಸಂಖ್ಯಾತರಿಗೆ ಆಡಳಿತ ಮಂಡಳಿಯವರು ಪ್ರಾರಂಭಿಸುವ ಶಾಲೆಗಳಿಗೆ ಸರ್ಕಾರ ಅನುಮತಿ ನೀಡದೇ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಇದು ಸರ್ಕಾರದ ನೀತಿಗೆ ವಿರುದ್ಧವಲ್ಲವೇ ?

ಇ) ಸರ್ಕಾರವು ಮುಂದಿನ ಸಂಸ್ಥೆಗಳಿಗೆ ಶಾಲೆ ಪ್ರಾರಂಭಿಸಲು ಅನುಮತಿ ನೀಡಲು ಜರೂರಾಗಿ ಕ್ರಮ ಕೈಗೊಳ್ಳುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).

ಅ) ಕೆಲವು ಶಾಲೆಗಳಿಗೆ ಕೊಟ್ಟಿಲ್ಲ,

ಆ) ಇಲ್ಲ.

ಇ) ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಶಾಲೆಯನ್ನು ಪ್ರಾರಂಭಿಸಲು ಕೋರಿರುವ ಸ್ಥಳದಲ್ಲಿ ಶಾಲೆಯ ಅವಶ್ಯಕತೆಯಿದ್ದಲ್ಲಿ ಪರಿಶೀಲಿಸಿ ನಿಯಮಾವಳಿಗಳ ಪ್ರಕಾರ ಅನುಮತಿಯನ್ನು ನೀಡಲಾಗುವುದು.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.—ಮಾನ್ಯ ಅಧ್ಯಕ್ಷರೇ, ಅನೇಕ ಜನ ಅಲ್ಪಸಂಖ್ಯಾತ ಕೋಮಿನವರು ನಮಗೆ ಶಾಲೆಗಳನ್ನು ಕೊಡಿಸಿಂದು ಅರ್ಜಿ ಹಾಕಿಕೊಂಡಿದ್ದಾರೆ. ನರ್ಸರಿ ಶಾಲೆ, ಪ್ರೈಮರಿ ಶಾಲೆ, ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ಆ ಅರ್ಜಿಗಳನ್ನು ಸರ್ಕಾರ ರಿಜೆಕ್ಟ್ ಮಾಡಿದೆ. ಸಂವಿಧಾನದ ಪ್ರಕಾರ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡಬೇಕು. ಸಂವಿಧಾನದ ಪ್ರಕಾರ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವ ಗ್ಯಾರಂಟಿ ಇದೆಯೇ ?